ದಿನಾಂಕ: **09-06-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ.ಬಿ.ವಿ.ಪಿ. ವಕೀಲರಿಂದ**

1. ಸರ್ವೆ ನಂ.293/1 ಮತ್ತು 293/2 ಎರಡೂ ಜಮೀನು ಸೇರಿ 32 ಎಕರೆ 13 ಗುಂಟೆ ಇತ್ತು ಎಂದರೆ ಸರಿ. ಈವೆರಡೂ ಜಮೀನು ಹುಸೇನಬಿ ರಾಜಬೇಗ ಮುಲ್ಲಾರವರ ಮಾಲ್ಕಿಯಲ್ಲಿತ್ತು ಎಂದರೆ ಸರಿಯಲ್ಲ. ಸರ್ವೆ ನಂ.292, 296 ಮತ್ತು 297 ಮತ್ತು 298 ದಿನಾಂಕಃ 18-07-1944 ಕ್ಕೆ ಹುಸೇನಬಿ ಯಾಸೀನ್ ಖಾನ್ ಗೆ ಭಕ್ಷಿಸು ಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಖಾತನುಬಿ ಯಾಸೀನ್ ಖಾನ್ ರವರ ಮನೆಯಲ್ಲಿ ಕೆಲಸ ಮಾಡುತ್ತಾ ಇದ್ದರು ಎಂದರೆ ಸರಿಯಲ್ಲ. ಹುಸೇನಬಿ ಮುಲ್ಲಾ ದಿನಾಂಕಃ 07-02-1951 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ಖಾತುನಬಿ ಅವರ ಮನೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಯಾಸೀನ್ ಖಾನ್ ನಿಗೆ ಗೊತ್ತಾಗದೆ ಹಳೆ ಸರ್ವೆ ನಂ.172 ರಲ್ಲಿ ತನ್ನ ಹೆಸರನ್ನು ಉತಾರೆಯಲ್ಲಿ ಹಚ್ಚಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.297 ಮತ್ತು 298 ಜಮೀನುಗಳನ್ನು ಖಾತುನಬಿ ದಾದಿಮಾ ಎನ್ನುವವರಿಗೆ ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ. ಖಾತುನಬಿ

ತೀರಿಕೊಂಡ ನಂತರ 1964 ರಲ್ಲಿ ಅಸಾದ್ ಖಾನ್ ನು ತಾನು ಆಕೆಯ ವಾರಸುದಾರನೆಂದು ತನ್ನ ಹೆಸರಿಗೆ ಎಂಟ್ರಿ ಮಾಡಿಕೊಂಡಿದ್ದನು ಎಂದರೆ ಗೊತ್ತಿಲ್ಲ. ಸರ್ವೆ ನಂ.178, 188, 175, 187 ಈ ದಿನ ಮುಂದಿನ ಸರ್ವೆ ನಂ.292 ಮತ್ತು 296, 297 ಮತ್ತು 298 ಜಮೀನುಗಳಲ್ಲಿ ಸರ್ವೆ ನಂ.297 ಮತ್ತು 298 ಗೊತ್ತಾಗದೆ ದಾದಿಮಾ ಗೆ ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ. ಭೂ ನ್ಯಾಯಮಂಡಳಿಯಲ್ಲಿ ಅಸಾದ್ ಖಾನ್ ಮತ್ತು ಯಾಸೀನ್ ಖಾನಿ ಮತ್ತು ದಾದಿಬಿ ಮದ್ಯ ನ್ಯಾಯ ನಡೆದಿತ್ತು ಎಂದರೆ ಗೊತ್ತಿಲ್ಲ. ದಾದಿಬಿ ಮಾಲೀಕರಾದ ನಂತರ ದಿನಾಂಕಃ 03-11-1998 ರಲ್ಲಿ ಸರ್ವೆ ನಂ.297 ಮತ್ತು 298 ವಾದಿಯರ ಹೆಸರಿಗೆ ಬಿಟ್ಟುಕೊಟ್ಟಿದ್ದರು ಎಂದರೆ ಗೊತ್ತಿಲ್ಲ.

2. ಲಾಡಬೇಗ ನನ್ನ ಮುತ್ಯಾನಾಗಬೇಕು. ಯಾಸೀನ್ ಖಾನ್ ಈತನು ವಾದಿಯ ತಂದೆಯ ಅಣ್ಣ ಎಂದರೆ ಗೊತ್ತಿಲ್ಲ. 1971 ನೇ ಇಸವಿಯಲ್ಲಿ ವಿಜಯಪುರದ ಸಿವಿಲ್ ನ್ಯಾಯಾಲಯದಲ್ಲಿ ಎಲ್ಲ ಜಮೀನುಗಳ ಮದ್ಯೆ ಆರ್.ಎ.ನಂ.199/1967 ನಡೆದಿತ್ತು. ಸದರಿ ದಾವೆಯನ್ನು ತೆಗೆದು ನೋಡಿಲ್ಲ. ಸದರಿ ದಾವೆ ಲಾಡಬೇಡ ಮಿರ್ಜಾಬೇಗ ರವರ ವಿರುದ್ದ ಆದವು ಎಂದರೆ ಸಾಕ್ಷಿಯು ನಮ್ಮಂತೆ ಆಗಿದೆ ಎಂದು ಉತ್ತರಿಸುತ್ತಾರೆ. ಲಾಡಬೇಗ

ಮಿರ್ಜಾಬೇಗ ಮುಲ್ಲಾ ಆರ್.ಎ.ನಂ.199/1967 ಎರಡು ಜಮೀನುಗಳು ಲಾಡಬೇಗ ಮಿರ್ಜಾಬೇಗ ಮುಲ್ಲಾ ತಾನು ಮಾಲೀಕ ಎಂದು ಮಾಡಿದ್ದರು, ಸದರಿ ದಾವೆಗಳು ವಜಾವಾದವು ಎಂದರೆ ಸರ್ವೆ ನಂ.293/1 ಮತ್ತು 293/2 ಮಿರ್ಜಾಬೇಗನ ಆಸ್ತಿ ಎಂದು ಉತ್ತರಿಸುತ್ತಾರೆ. ಅಸಲ ದಾವಾ ನಂ.73/1964 ರ ದಾವೆ ವಜಾಗೊಂಡಿದ್ದರಿಂದ, ಆರ್.ಎ.ನಂ.199/1967 ಮಾಡಿದ್ದರು, ಅದೂ ಸಹ ವಜಗೊಂಡಿತು ಎಂದರೆ ಸರಿಯಲ್ಲ. 1971 ರಲ್ಲಿ ದಾವೆಗಳು ವಜಾಗೊಂಡಿದ್ದರಿಂದ, ಸರ್ವೆ ನಂ.293/1 ಮತ್ತು 293/2 ಮಾಲ್ಕಿ ಹಕ್ಕನ್ನು ಆ ಸಮಯದಲ್ಲಿ ಕಳೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ಆ ಆಸ್ತಿಗಳು ನಮ್ಮದೇ ಎಂದು ಉತ್ತರಿಸುತ್ತಾರೆ. ಸದರಿ ಆರ್.ಎ. ವಜಾಗೊಂಡ ನಂತರ ಅಪೀಲು ಏನಾದರೂ ಮಾಡಿದ್ದೀರಾ ಎಂದರೆ ಸಾಕ್ಷಿಯು ಅಲ್ಲಿ ನಮ್ಮಂತೆ ಆಗಿದೆ ಎಂದು ಉತ್ತರಿಸುತ್ತಾರೆ. ಆರ್.ಎ.ನಂ.199/1967 ರ ಮೇಲೆ ದಿನಾಂಕಃ 27-02-1971 ರ ಮೇಲೆ ಯಾವುದೇ ಮೇಲ್ಮನವಿ ಮಾಡಿಲ್ಲ. ನಿಮ್ಮ ಹೆಸರು ಉತಾರೆಯಲ್ಲಿ ಇರುವುದರಿಂದ ಎನ್.ಟಿ.ಪಿ.ಸಿ. ಯವರು ಜಮೀನನ್ನು ಮುಳುಗಡೆ ಮಾಡಿರುವ ಪರಿಹಾರದ ಹಣವನ್ನು ಮೋಸ ಮಾಡಿ ಪಡೆದುಕೊಂಡಿದ್ದೀರಿ ಎಂದರೆ

ಸಾಕ್ಷಿಯು 90 ವರ್ಷಗಳಿಂದ ಉತಾರೆಯಲ್ಲಿ ನಮ್ಮ ಹಿರಿಯರ ಹೆಸರು ಇರುವುದರಿಂದ ಎನ್.ಟಿ.ಪಿ.ಸಿ. ನಮಗೆ ನೋಟೀಸು ಕೊಟ್ಟು ವಿಚಾರ ಮಾಡಿ ಹಣವನ್ನು ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಸರಕಾರ ಅಧಿಕಾರಿಗಳಿಗೆ ಮೋಸ ಮಾಡಿದ್ದರಿಂದ, ಪರಿಹಾರ ಹಣವನ್ನು ಮರಳಿ ಕೊಡುತ್ತೇವೆ ಎಂದು ದೃಡೀಕರಣ ಪತ್ರವನ್ನು ಬರೆದುಕೊಟ್ಟು ಹಣವನ್ನು ಪಡೆದಿದ್ದೀರಿ ಎಂದರೆ ಸರಿ. 1971 ರಲ್ಲಿ ಆದಂತಹ ಡಿಕ್ರಿಯ ವಿಷಯ ನಿಮಗೆ ಗೊತ್ತಿದ್ದರೂ ಸಹ ನಿಮ್ಮ ಹಿಂದಿನ ವಕೀಲರಿಗೆ ಗೊತ್ತಿದ್ದರೂ ಸಹ ಸರಕಾರಿ ಅಧಿಕಾರಿಗಳಿಗೆ ಮೋಸ ಮಾಡಿ ಹಣವನ್ನು ಪಡೆದಿದ್ದೀರಿ ಎಂದರೆ ಸರಿಯಲ್ಲ.

3. ಯಾಸೀನ್ ಖಾನ್ ಗೊತ್ತಿಲ್ಲ. ಮೈನುದ್ದೀನ್ ಖಾಜಿಯ ತಮ್ಮನ ಮಗ ಅಬ್ದುಲ್ ಅಜೀಜ್ ಖಾಜಿಗೆ 1935 ರಲ್ಲಿ ಮೃತ್ಯು ಪತ್ರ ಮಾಡಿ ಮಾಲ್ಕಿ ಹಕ್ಕನ್ನು ವರ್ಗಾವಣೆ ಮಾಡಿದ್ದಾರೆ ಎಂದರೆ ಸಾಕ್ಷಿಯು ಆ ಸರ್ವೆ ನಂಬರ್ ಬೇರೆ ಇದೆ ಎಂದು ಉತ್ತರಿಸುತ್ತಾರೆ. ಸರ್ವೆ ನಂ.177, 178 ಈ ಎರಡೂ ಜಮೀನುಗಳನ್ನು ಮೃತ್ಯು ಪತ್ರದಲ್ಲಿ ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಅದೇ ರೀತಿ ಇನ್ನೊಂದು ಮೃತ್ಯು ಪತ್ರದಲ್ಲಿ ಯಾಸೀನ್ ಖಾನ್ ರವರು ಅಬ್ದುಲ್

ಅಜೀಜ್ ಅವರು ಮೈನುದ್ದೀನ್ ಖಾಜಿ ರವರಿಗೆ 1957 ರಲ್ಲಿ ಸರ್ವೆ ನಂ.175 ಮತ್ತು 188, 17 ಎಕರೆ ಮತ್ತು 15 ಎಕರೆ 34 ಗುಂಟೆ ಜಮೀನುಗಳನ್ನು ಮೃತ್ಯು ಪತ್ರದ ಮೂಲಕ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಮಾಡಿಲ್ಲ, ಅದು ನಮ್ಮ ಆಸ್ತಿ ಎಂದು ಉತ್ತರಿಸುತ್ತಾರೆ. ಅಬ್ದುಲ್ ಅಜೀಜ್ ಖಾಜಿಯವರಿಗೆ ಸರಕಾರದವರಾಗಲೀ, ಎನ್.ಟಿ.ಪಿ.ಸಿ.ಯವರಾಗಲೀ ಅವರಿಗೆ ನೋಟೀಸು ಏನಾದರೂ ಕೊಟ್ಟಿದ್ದಾರಾ ಎಂದರೆ ಸಾಕ್ಷಿಯು ನೋಟೀಸು ಕೊಟ್ಟಿಲ್ಲ, ಅದು ನಮ್ಮ ಆಸ್ತಿ ಇತ್ತು, ಹಣ ನಾವೇ ಪಡೆದಿದ್ದೇವೆ ಎಂದು ಉತ್ತರಿಸುತ್ತಾರೆ. ಕಂದಾಯ ದಾಖಲಾತಿಗಳನ್ನು ಯಾಸೀನ್‌ಖಾನ್ ನು ಅಬ್ದುಲ್ ಅಜೀಜ್ ಖಾಜಿ ಈತನಿಗೆ ಮೃತ್ಯು ಪತ್ರದ ಮೂಲಕ ಜಮೀನುಗಳನ್ನು ಮಾಡಿದ್ದರೂ ಸಹ ಖೊಟ್ಟಿಯಾಗಿ ಮೋಸ ಮಾಡಿ ಹಣವನ್ನು ಪಡೆದಿದ್ದೀರಿ ಎಂದರೆ ಸರಿಯಲ್ಲ. ವಾದಿಯು ಡೆಪ್ಯೂಟಿ ಕಮೀಷನರ್ ರವರಿಗೆ ಅರ್ಜಿಯನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

4. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನೀವು ಮಾಡಿದಂತಹ ಅಪೀಲಿನ ಬಗ್ಗೆ ನೀವು ಹಾಜರುಪಡಿಸಿದಂತಹ ದಾಖಲೆಗಳಲ್ಲಿ ಇಲ್ಲ ಎಂದರೆ ಸಾಕ್ಷಿಯು ಇದೆ ಎಂದು ಉತ್ತರಿಸುತ್ತಾರೆ.

ಡ.ನಂಬರ್ ಆಗಿರುವ ಬಗ್ಗೆ ಅಬ್ದುಲ್ ಅಜೀಜ್ ಖಾಜಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡಿದ್ದ ಎಂದರೆ ಸರಿ. ನೀವು ಎರಡು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ವಾದಿಗೆ ಲುಕ್ಸಾನ ಮಾಡಿದ್ದರಿಂದ, ವಾದಿಗೆ ಮರಳಿ ಕೊಡಬೇಕಾಗುತ್ತದೆ ಎಂದರೆ ಸಾಕ್ಷಿಯು ನಮ್ಮ ಆಸ್ತಿಯ ದುಡ್ಡು ಇರುವುದರಿಂದ, ತೆಗೆದುಕೊಂಡಿದ್ದೇವೆ ಎಂದು ಉತ್ತರಿಸುತ್ತಾರೆ. ನ್ಯಾಯಾಲಯದಲ್ಲಿ ಜಮಾ ಆದಂತಹ ಹಣದ ಮೇಲೆ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.